# ಕೀರ್ತಿಯ ಸ್ಫೂರ್ತಿ

■ ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ

ಚಿತ್ರ: ಸಂತೋಷ್ ಸಸಿಹಿತ್ಲು



ಕೀರ್ತಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಮೃದು ಸ್ವಭಾವದ, ಸೂಕ್ಷ್ಮಮತಿ. ಓದುವುದರಲ್ಲಿ ತುಂಬಾ ಚುರುಕು. ಗುರು ಹಿರಿಯರ ಬಗ್ಗೆ ಅಪಾರ ಗೌರವ. ಪರೋಪಕಾರಿ. ಆಕೆ ತರಗತಿಯಲ್ಲಿ ತನ್ನ ಸಹಪಾಠಿಗಳಿಗೆ ಪೆನ್ನು, ಸೀಸದ ಕಡ್ಡಿಯೋ, ಅಳಿಸುವ ರಬ್ಬರೋ ಬೇಕಾಗಬಹುದೆಂದು ಊಹಿಸಿ, ಅಪ್ಪ, ಅಮ್ಮ, ಮಾಮ, ಮಾಮಿ ಆಗೊಮ್ಮೆ, ಈಗೊಮ್ಮೆ ಖರ್ಚಿಗೆಂದು ಕೊಡುತ್ತಿದ್ದ ಹಣದಲ್ಲಿಯೇ ಖರೀದಿಸಿ, ತನ್ನ ಚೀಲದಲ್ಲಿ ಇಟ್ಟುಕೊಂಡಿರುತ್ತಿದ್ದಳು. ತರಗತಿ ಕೋಣೆಯಲ್ಲಿ, ಶಾಲೆಯ ಅಂಗಳದಲ್ಲಿ ಎಲ್ಲಾದರೂ ಕಸ ಕಡ್ಡಿ ಬಿದ್ದಿದ್ದರೆ ತಾನೇ ಸ್ವಯಂ ಸ್ಫೂರ್ತಿಯಿಂದ ಎತ್ತಿಕೊಂಡು ಕಸದ ಡಬ್ಬಿಯಲ್ಲಿ ಹಾಕುತ್ತಿದ್ದಳು. ತನ್ನ ಓರಗೆಯವರಿಗೂ ಹಾಗೆ ಮಾಡುವಂತೆ ಪ್ರೇರಣೆಯ ಮಾತುಗಳನ್ನು ಹೇಳುತ್ತಿದ್ದಳು. ಇಂತಹ ವಿನಯವಂತ ವಿದ್ಯಾರ್ಥಿನಿ ಶಾಲೆಯಲ್ಲಿ ಯಾರಿಗೆ ತಾನೆ ಇಷ್ಟವಾಗಲಾರಳು?

ಅವಳು ಓದುತ್ತಿದ್ದ ಶಾಲೆಯೂ ಅಷ್ಟೇ ಪ್ರಾಮಾಣಿಕ ಶಿಕ್ಷಕರನ್ನು ಹೊಂದಿತ್ತು. ತಮ್ಮದು ಸರ್ಕಾರಿ ಶಾಲೆ ಆದರೂ ಯಾವುದೇ ಪ್ರತಿಷ್ಠಿತ ಶಾಲೆಗಳಿಗೂ ಕಡಿಮೆ ಇಲ್ಲ ಎಂಬುದನ್ನು ಅವರು ಸಾಬೀತು ಮಾಡಿದ್ದರು. ಶಾಲೆಯು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸದಾ ಮುಂದಿತ್ತು. ಸ್ಫೂರ್ತಿ ನೀಡಲು ಮುಖ್ಯಗುರುಗಳು ಸಿದ್ಧರಿದ್ದರೆ ಕೀರ್ತಿ ತರಲು ಉಳಿದೆಲ್ಲ ಸಿಬ್ಬಂದಿ ಟೊಂಕ ಕಟ್ಟಿ ನಿಂತಿದ್ದರು. ವಿಜ್ಞಾನ ಶಿಕ್ಷಕರು ತಮ್ಮ ಮಕ್ಕಳನ್ನು ಕರ್ನಾಟಕ ವಿಜ್ಞಾನ ಪರಿಷತ್ತಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ವಿಜ್ಞಾನ ಸಮಾವೇಶದ ಸ್ಪರ್ಧೆಗೆ ಕರೆದುಕೊಂಡು ಹೋಗಿದ್ದರು. ಆ ಮಕ್ಕಳೇ ವಿಜೇತರಾಗಿ ರಾಜ್ಯಮಟ್ಟದ ಸ್ಪರ್ಧೆಗೂ ಹೋಗಿದ್ದರು.

ರಾಜ್ಯ ಸಮಾವೇಶದಲ್ಲಿ ಕೀರ್ತಿ ಆಕೆಯ ಸಹಪಾಠಿ ಕರುಣಾ ಇಬ್ಬರು ಅತ್ಯುತ್ತಮ ವರದಿಯನ್ನು ಮಂಡನೆ ಮಾಡಿ ರಾಷ್ಟ್ರಮಟ್ಟಕ್ಕೂ ಆಯ್ಕೆಯಾದರು. ಅವರಿಬ್ಬರ ವರದಿ ಮಂಡನೆಗೆ ಇಡೀ ನಿರ್ಣಾಯಕ ಮಂಡಳಿಯೇ ಶಹಭಾಷ್ ಎಂದು ಹೇಳಿತು. ವರದಿ ಮಂಡನೆಯ ನಂತರ ವಿಜೇತ ತಂಡಗಳ ಅಭಿಪ್ರಾಯವನ್ನು ಸಮಾರೋಪದಲ್ಲಿ ಕೇಳಿದಾಗ, ಇನ್ನಿತರ ವಿಜೇತರು ತಮ್ಮ ಶ್ರಮದ ಬಗ್ಗೆ, ಶಿಕ್ಷಕರ ಪ್ರೋತ್ಸಾಹದ ಬಗ್ಗೆ ಹೇಳಿದರು. ಕೀರ್ತಿ ತಂಡದ ಸರದಿ ಬಂದಾಗ, ಆಕೆ ಹೇಳಿದ ಮೊದಲ ಮಾತು 'ಕಳೆದ ವರ್ಷ ತಮಗೆ ಉಂಟಾದ ಸೋಲಿಗೆ ಧೃತಿಗೆಡದೆ, ಆತ್ಮವಿಶ್ವಾಸದಿಂದ ವರದಿ ತಯಾರಿಸಿದ್ದು ಇಂದಿನ ಗೆಲುವಿಗೆ ಕಾರಣ. ಗೆಲುವನ್ನು ನಾವು ಹೇಗೆ ಸಂಭ್ರಮಿಸುತ್ತೇವೆಯೋ, ಸೋಲನ್ನು ಒಪ್ಪಿಕೊಳ್ಳುವ ಮೂಲಕ, ಗೆಲುವಿನೆಡೆಗೆ ಸಾಗುವ ಹಾದಿಯನ್ನು ಕಂಡುಕೊಳ್ಳಬೇಕು. ಕಳೆದ ಬಾರಿ ನಾವು ಸೋತಾಗ ವಿದ್ಯಾಮಂದಿರದ ನೋಟಿಸ್ ಬೋರ್ಡಿನಲ್ಲಿ **'Take risk in your life. If you win you can lead, if you loose you can guide'** (ಜೀವನದಲ್ಲಿ ಸವಾಲುಗಳನ್ನು ಸ್ವೀಕರಿಸಿ, ಗೆದ್ದರೆ ಆನಂದ, ಸೋತರೆ ಅನುಭವ) ಹೀಗೆ ಬರೆದಿತ್ತು. ಅದು ಹೇಳಿಕೇಳಿ ಸ್ಫೂರ್ತಿಯ ಕಿರಣ ಸ್ವಾಮಿ ವಿವೇಕಾನಂದರ ವಾಣಿ. **'Arise, awake and stop not till the goal is reached'** (ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲಬೇಡಿ) ಈ ಅಮೃತದಂತಹ ಎರಡು ಮಾತುಗಳು ಮತ್ತೆ ಮತ್ತೆ ನಮ್ಮನ್ನು ಎಚ್ಚರಿಸುತ್ತವೆ. ಇಂದಿನ ಗೆಲುವಿಗೂ ಆ ಮಾತೇ ಕಾರಣ ಎಂದು ಹೇಳಿದಾಗ ತುಂಬಿದ ಸಭೆಯಲ್ಲಿ ಜೋರು ಕರತಾಡನ. ಸ್ಪರ್ಧೆಯಲ್ಲಿ ಸೋತು ಸಪ್ಪೆ ಮೋರೆ ಹಾಕಿದ್ದ ಇತರೆ ಮಕ್ಕಳ ಮೊಗದಲ್ಲಿ ಈ ಮಾತುಗಳು ಆತ್ಮವಿಶ್ವಾಸವನ್ನು ತುಂಬಿದವು. ನಿರಂತರವಾಗಿ ಪ್ರಯತ್ನಿಸಿದರೆ ಮುಂದೊಂದು ದಿನ ತಮಗೆ ಗೆಲುವು ನಿಶ್ಚಿತ ಎಂಬುದನ್ನು ಮತ್ತೆ ಕೀರ್ತಿಯ ನುಡಿ ಸಾರಿ ಹೇಳುವಂತಿದ್ದವು. ಅಧ್ಯಕ್ಷತೆಯನ್ನು ವಹಿಸಿದ್ದ ಮಹೋದಯರು 'ಹತ್ತು ಸಾವಿರ ರೂಪಾಯಿ ಬಹುಮಾನವನ್ನು ನೀಡಿ, ಆ ಮಗು ನಮ್ಮ ನಿಮ್ಮೆಲ್ಲರ ಕಣ್ಣುಗಳನ್ನು ತೆರೆಸಿದಳು, ಒಂದು ಸೋಲು ಯಾವತ್ತೂ ಸೋಲಲ್ಲ, ಸೋಲಿನಿಂದ ಧೃತಿಗೆಡದೆ, ಮರು ಯತ್ನ ಮಾಡಿದರೆ ಹಲವು ಗೆಲುವಿನ ಮಾರ್ಗಗಳನ್ನು ಕಂಡುಕೊಳ್ಳಬಹುದು' ಎಂದರು. ಕೀರ್ತಿ ತನ್ನ ಪ್ರೇರಣಾದಾಯಕ ಮಾತುಗಳ ಮೂಲಕ ಎಲ್ಲರಿಗೂ ಸ್ಫೂರ್ತಿಯಾದಳು. ■